ದೂರವಾಣಿ: 22341691

ಕರ್ನಾಟಕ ಸರ್ಕಾರ

(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ : ಮುವಿಪ/ವಿಪಇ/ಎಲ್ಇಸಿ/ 18 /2015-16

ಮುಖ್ಯ ವಿದ್ಯುತ್ ಪರಿವೀಕ್ಷರ ಕಛೇರಿ
#32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001

ದಿನಾಂಕ: 30|6|15

**"ಸುತ್ತೋಲೆ"**

ವಿಷಯ: ಮುಕ್ತ ವಿಶ್ವವಿದ್ಯಾಲಯ, ದೂರ ಶಿಕ್ಷಣ, ಓಪನ್ ಸ್ಕೂಲ್ ಮತ್ತು ಬ್ರಿಡ್ಜ್ ಕೋರ್ಸ್ ವ್ಯವಸ್ಥೆಯ ಅಡಿಯಲ್ಲಿ ಪಡೆದಿರುವ ವಿದ್ಯಾರ್ಹತೆಯ ಆಧಾರದ ಮೇಲೆ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ / ಗಣಿ, ತಂತೀ ಕೆಲಸಗಾರರ ರಹದಾರಿಗಳು ಮತ್ತು ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸದೇ ಇರುವ ಬಗ್ಗೆ.

*****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ, ತಂತಿ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012 ರ ನಿಯಮ 12(1)(ಬಿ), 19(3), 23(3), ಮತ್ತು 26(2) ರ ಅಡಿಯಲ್ಲಿ ಈ ಕೆಳಕಂಡ ವಿಷಯಗಳಿಗಾಗಿ ಅರ್ಜಿದಾರರ ಕನಿಷ್ಠ ವಿದ್ಯಾರ್ಹತೆಯನ್ನು ನಿಗಧಿ ಪಡಿಸಿರುತ್ತದೆ.

1. ನಿಯಮ 12(1)(ಬಿ)ರ ಅಡಿಯಲ್ಲಿರುವಂತೆ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾಗಿ ಪಡೆಯಲು ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

   "Rule12(1)(b):- The applicant must have attained the age of 21 years as on the date of application and has passed TENTH standard examination".

2. ನಿಯಮ 19(3)ರ ಅಡಿಯಲ್ಲಿ ಹೊಸ ವಿದ್ಯುತ್ ಮೇಲ್ವಿಚಾರಕರು ಸಾಮಾನ್ಯ ರಹದಾರಿ ಪಡೆಯಲು ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

   "Rule19(3):- must be holding bachelor degree or Diploma in Electrical Engineering discipline or any other educational qualification which is recognized as equivalent to the above by the Directorate of Technical Education, Government of Karnataka, Bangalore. For grant Electrical Supervisor (General) permit Grade 1 in Form **1** and Electrical Supervisory certificate of competency in Form I".

3. ನಿಯಮ 23(3)ರ ಅಡಿಯಲ್ಲಿ ಹೊಸ ವಿದ್ಯುತ್ ಮೇಲ್ವಿಚಾರಕರು ಗಣಿ ರಹದಾರಿ ಪಡೆಯಲು ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

   "Rule23(3):-to grant Electrical Supervisor (Mines) Grade 1 permit in Form **3** and Electrical Supervisory certificate of competency in Form K, the applicant shall be a Graduate or Diploma in Electrical Engineering discipline or any other educational qualification which is recognized as equivalent to the above by the Directorate of Technical Education, Government of Karnataka, Bangalore. The Applicant may be exempted for appearing written examination but shall pass the practical and oral examination conducted by the Board"

4. ನಿಯಮ 26(2)ರ ಅಡಿಯಲ್ಲಿ ಹೊಸ ತಂತೀ ಕೆಲಸಗಾರರ ರಹದಾರಿ ಪಡೆಯಲು ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

"Rule26(2):-For grant Electrical Wireman Grade 1 permit in Form 5, in addition

(a) and (b) above the applicant, shall hold Wireman or Electrician or Electrical Trade Certificate issued by the institutions recognized by the State Government or shall hold a Job oriented pre-university Diploma certificate in the vocational course of Electrical Wiring and Servicing of Electrical Appliances granted by the Karnataka State Council of Vocational Education or shall hold any other certificate which is recognized as equivalent by the Directorate of Employment and Training, Government of Karnataka, Bangalore".

ಈ ರೀತಿ ಮೇಲೆ ನಿಗಧಿ ಪಡಿಸಿರುವ ವಿದ್ಯಾರ್ಹತೆಯ ಆಧಾರದ ಮೇಲೆ ಸಲ್ಲಿಸಲಾದ ಅರ್ಜಿಗಳನ್ನು ಸ್ವೀಕರಿಸಿ, ಅಂತಹ ಅರ್ಜಿಗಳನ್ನು ಪರಿಶಿಲಿಸಿ ನಿಯಮಾನುಸಾರ ಸಂಬಂದಿಸಿದ ಪರವಾನಗಿ ಅಥವ ರಹದಾರಿಗಳನ್ನು ಮಂಜೂರು ಮಾಡಿ ಅರ್ಜಿಗಳನ್ನು ವಿಲೇವಾರಿ ಮಾಡಲು ಅವಕಾಶ ಇರುತ್ತದೆ. ಒಂದೊಮ್ಮೆ ಕರ್ನಾಟಕ ರಾಜ್ಯವನ್ನು ಹೊರತು ಪಡಿಸಿ ಅನ್ಯ ರಾಜ್ಯಗಳ ಅಭ್ಯರ್ಥಿಗಳು, ಅವರ ರಾಜ್ಯದ ತಾಂತ್ರಿಕ ಶಿಕ್ಷಣ ಮಂಡಳಿ / ವಿಶ್ವ ವಿದ್ಯಾನಿಲಯಗಳಿಂದ ಪಡೆದುಕೊಂಡಿರುವ ತಾಂತ್ರಿಕ ವಿದ್ಯಾರ್ಹತೆಯ ಮೇಲೆ ಸಂಭಂದಿಸಿದ ರಹದಾರಿಗಳಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ, ಅಂತಹಾ ಅರ್ಜಿಗಳನ್ನು ಸ್ವೀಕರಿಸಿ ಸದರಿ ಅರ್ಜಿದಾರರುಗಳು ಪಡೆದಿರುವ ವಿದ್ಯಾರ್ಹತೆಯ ಬಗ್ಗೆ ತಾಂತ್ರಿಕ ಶಿಕ್ಷಣ ಮಂಡಳಿ / ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾನಿಲಯಕ್ಕೆ ತತ್ಸಮಾನ ಪ್ರಮಾಣ ಪತ್ರಕ್ಕಾಗಿ ಕಳುಹಿಸಿ ಸದರಿ ಇಲಾಖೆಗಳಿಂದ ಬಂದ ವರಧಿಯನ್ನು ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಸಭೆಗೆ ಮಂಡಿಸಿ, ಮಂಡಳಿಯ ತೀರ್ಮಾನದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಆದರೆ ಇತ್ತೀಚ್ಚಿನ ದಿನಗಳಲ್ಲಿ ಅರ್ಜಿದಾರರು 10ನೇ ತರಗತಿಯನ್ನು ಮುಕ್ತ ವಿಶ್ವ ವಿದ್ಯಾನಿಲಯ, ದೂರ ಶಿಕ್ಷಣ ವ್ಯವಸ್ಥೆ, ಓಪನ್ ಸ್ಕೂಲ್ ಅಥವಾ ಬ್ರಿಡ್ಜ್ ಕೋರ್ಸ ಅಡಿಯಲ್ಲಿ ಉತ್ತೀರ್ಣವಾಗಿರುವ ದಾಖಲೆಗಳನ್ನು ಮತ್ತು ಕೆಲವು ಅಭ್ಯರ್ಥಿಗಳು ಮುಕ್ತ ವಿಶ್ವ ವಿದ್ಯಾನಿಲಯ ಅಥವಾ ದೂರ ಶಿಕ್ಷಣ ವ್ಯವಸ್ಥೆ ಅಡಿಯಲ್ಲಿ ಪಡೆದು ಕೊಂಡಿರುವ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲಮೋ ಅಥವಾ ಇಂಜಿನಿಯರಿಂಗ್ ಪದವಿಯನ್ನು ಪಡೆದುಕೊಂಡಿರುವ ದಾಖಲೆಗಳನ್ನು ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ. ಅಂತಹ ವಿದ್ಯಾರ್ಹತೆಯ ದಾಖಲೆಗಳನ್ನು ತತ್ಸಮಾನ ಪ್ರಮಾಣ ಪತ್ರಕ್ಕಾಗಿ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯ, ಬೆಳಗಾವಿ ರವರಿಗೆ ಕಳುಹಿಸಲಾಗಿ, ಸದರಿ ಇಲಾಖೆಯವರು ಮುಕ್ತ ವಿಶ್ವ ವಿದ್ಯಾನಿಲಯ ಅಥವಾ ದೂರ ಶಿಕ್ಷಣ ವ್ಯವಸ್ಥೆ ಅಡಿಯಲ್ಲಿ ಪಡೆದುಕೊಂಡಿರುವ ತಾಂತ್ರಿಕ ವಿದ್ಯಾರ್ಹತೆಯು ಸಾಂಪ್ರದಾಯಿಕ ತಾಂತ್ರಿಕ ಶಿಕ್ಷಣ ಇಲಾಖೆ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯದಿಂದ ನೀಡಲಾಗುವ ವಿದ್ಯಾರ್ಹತೆಗೆ ತತ್ಸಮಾನವಾಗಿರುವುದಿಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ.

ಮುಂದುವರೆದು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ, ಉನ್ನತ ಶಿಕ್ಷಣ ಇಲಾಖೆಯು ನೀಡಿರುವ ಅರೆ ಸರ್ಕಾರಿ ಪತ್ರದ ಸಂ. D.O No.6-7/2009 DL New Delhi Dated 29-07-2009, ಈ ಕೆಳಕಂಡಂತೆ ಇರುತ್ತದೆ.

"The matter regarding recognition of B.Tech degree awarded by UGC recognized Universities through Distance Mode was examined in the Ministry. After a detailed

examination of the subject matter referred above, the following course of action has been approved at the highest level in the Ministry;

(i) DEC should immediately withdraw permission given to various institutions to conduct B.Tech/ B.E progarmmes through Distance Mode and no student should be admitted in the current year also those who have already been admitted will have to pass both practical and written examination as may be prescribed in this regard, so as to give validity to the B.Tech/ B.E degree acquired by them through distance education.

In view of the above, I would request you kindly to take further necessary action to implement the action mentioned at para (i) above immediately and also further evolve a broad policy and guidelines to give effect to the action as mentioned at para (i) above. This being a very important and sensitive issue, an early action in the matter will be highly appreciated".

ಹಾಗೂ ಸದರಿ ವಿಷಯದ ಬಗ್ಗೆ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ (ಡಿಸ್ಟೆನ್ಸ್ ಏಜುಕೇಶನ್ ಕೌನ್ಸಿಲ್) ನವ ದೆಹಲಿರವರು ಪತ್ರದ ಸಂ.DEC/2009/2513-2729 ನವ ದೆಹಲಿ Dated 13.08.2009ರಲ್ಲಿ ಹೊರಡಿಸಿರುವ ಆದೇಶವು ಈ ಕೆಳಕಂಡಂತೆ ಇರುತ್ತದೆ.

"This has reference to the MHRD letter No.6-7/2009-DL Dated 29th July 2009, vide which MHRD has directed the DEC to immediately withdraw permission given to various institutions to conduct B.Tech/B.E Programmes through distance mode and also ensure that no student are admitted in the current year.

In this connection the Joint Committee of UGC-AICTE and DEC has not yet accorded any approval to BE/B.Tech programme of any University offered through distance mode. Any such programmes offered by a University are hence illegal and are not approved by the DEC.

Thus it is notified that the above notification of the MHRD is to be strictly adhered to and no University should offer any BE/B.Tech programme through distance mode. Any deviation from this policy may invite de-recognition of the concerned University by the DEC".

ಈ ರೀತಿ ಸೂಚಿಸಿರುವ ಎರಡು ಪತ್ರಗಳನ್ನು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯ, ಬೆಳಗಾವಿರವರಿಂದ ಸ್ವೀಕರಿಸಿದ ಪತ್ರಗಳನ್ನು ದಿನಾಂಕ 28-04-2015 ಮತ್ತು 27-05-2015ರಂದು ನಡೆದ ಕ್ರಮವಾಗಿ 24 ಹಾಗು 25 ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಸಭೆಗೆ ಮಂಡಿಸಿ ಚರ್ಚಿಸಲಾಗಿ, ಇನ್ನು ಮುಂದೆ ಮುಕ್ತ ವಿಶ್ವ ವಿದ್ಯಾನಿಲಯ ಅಥವಾ ದೂರ ಶಿಕ್ಷಣ ವ್ಯವಸ್ಥೆ ಅಡಿಯಲ್ಲಿ ಪಡೆದುಕೊಂಡಿರುವ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲಮೋ ಅಥವಾ ಇಂಜಿನಿಯರಿಂಗ್ ಪದವಿಯ ವಿದ್ಯಾರ್ಹತೆಯ ಆಧಾರದ ಮೇಲೆ ಹೊಸ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ ಗ್ರೇಡ್-1

ರಹದಾರಿಗಾಗಿ ಅಥವ ಐ ಟಿ ಐ ಎಲೆಕ್ಟ್ರಿಷಿಯನ್ ವಿದ್ಯಾರ್ಹತೆಯ ಆಧಾರದ ಮೇಲೆ ತಂತೀ ಕೆಲಸಗಾರರ ರಹದಾರಿಗಾಗಿ ಅಥವ 10 ನೇ ತರಗತಿ ( ಬ್ರಿಡ್ಜ್ ಕೋರ್ಸ್ ಅಥವ ಓಪನ್ ಸ್ಕೂಲ್) ಉತ್ತೀರ್ಣರಾಗಿರುವ ಆಧಾರದ ಮೇಲೆ ಹೊಸ ವರ್ಗ-2ರ ವಿದ್ಯುತ್ ಗುತ್ತಿಗೆದಾರರ ಪರವಾಗಿಗಾಗಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ, ಅಂತಹಾ ವಿದ್ಯಾರ್ಹತೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ಅರ್ಜಿದಾರರಿಗೆ ತಿಳಿಸಿ ಉಪ ವಿದ್ಯುತ್ ಪರಿವೀಕ್ಷಕರ ಮಟ್ಟದಲ್ಲೆ ಅರ್ಜಿಗಳನ್ನು ತಿರಸ್ಕರಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಸಲಾಯಿತು

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ, ತಂತಿ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012 ರ ನಿಯಮ 12ರಲ್ಲಿರುವಂತೆ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ನಿಯಮ 19ರಲ್ಲಿರುವಂತೆ ಹೊಸ ವಿದ್ಯುತ್ ಮೆಲ್ವೀಚಾರಕರ ಸಾಮನ್ಯ ರಹದಾರಿ, ನಿಯಮ 23 ರಲ್ಲಿರುವಂತೆ ಹೊಸ ವಿದ್ಯುತ್ ಮೆಲ್ವೀಚಾರಕರ ಗಣಿ ರಹದಾರಿ ಮತ್ತು ನಿಯಮ 26ರಲ್ಲಿರುವಂತೆ ತಂತೀ ಕೆಲಸಗಾರರ ರಹದಾರಿ ಪಡೆಯಲು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು 10ನೇ ತರಗತಿ ಉತ್ತೀರ್ಣರಾಗಿರುವ ಬಗ್ಗೆ ಕರ್ನಾಟಕ ರಾಜ್ಯದ ಅಥವ ಬೇರೆ ರಾಜ್ಯಗಳ ಸರ್ಕಾರದ ಪ್ರೌಢ ಶಿಕ್ಷಣ ಮಂಡಳಿಯಿಂದ ನೀಡುವ ಪ್ರಮಾಣ ಪತ್ರ, ಕರ್ನಾಟಕ ರಾಜ್ಯದ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ನೀಡಲಾದ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲಮೋ ಪ್ರಮಾಣ ಪತ್ರ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯ, ಬೆಳಗಾವಿರವರಿಂದ ನೀಡಲಾದ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿಯ ಪ್ರಮಾಣ ಪತ್ರ ಅಥವ ಕರ್ನಾಟಕ ರಾಜ್ಯದ ಅನುಮತಿ ಪಡೆದ ಡೀಮ್ಡ್ ವಿಶ್ವ ವಿದ್ಯಾನಿಲಯ ಅಥವ ಖಾಸಗಿ ವಿಶ್ವ ವಿದ್ಯಾನಿಲಯದಿಂದ ಪಡೆದ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿಯ ಪ್ರಮಾಣ ಪತ್ರ ಮತ್ತು ಕರ್ನಾಟಕ ರಾಜ್ಯ ವೃತ್ತಿ ಮತ್ತು ತರಬೇತಿ ಇಲಾಖೆಯಿಂದ ಅನುಮತಿ ಪಡೆದ ರಾಜ್ಯದಲ್ಲಿರುವ ಯಾವುದೇ ಐ ಟಿ ಐ ಕಾಲೇಜುಗಳಿಂದ ಪಡೆದ ಎಲೆಕ್ಟ್ರಷಿಯನ್ ಪ್ರಮಾಣ ಪತ್ರ(Provisional National Trade Certificate / National Trade Certificate)ಗಳನ್ನು ಸಲ್ಲಿಸಿದಲ್ಲಿ ಮಾತ್ರ ಅಂತಹ ಅರ್ಜಿಗಳನ್ನು ಸ್ವೀಕರಿಸಿ, ಪರಿಶಿಲಿಸಿ ಸೂಕ್ತ ಟಿಪ್ಪಣಿಯೊಂದಿಗೆ ಕೇಂದ್ರ ಕಚೇರಿಗೆ ಶಿಪಾರಸ್ಸು ಮಾಡುವುದು. ಒಂದೊಮ್ಮೆ ಅರ್ಜಿದಾರರು ಮುಕ್ತ ವಿಶ್ವ ವಿದ್ಯಾನಿಲಯ, ದೂರ ಶಿಕ್ಷಣ ವ್ಯವಸ್ಥೆ, ಓಪನ್ ಸ್ಕೂಲ್ ಅಥವಾ ಬ್ರಿಡ್ಜ್ ಕೊರ್ಸ ಅಡಿಯಲ್ಲಿ ಉತ್ತೀರ್ಣವಾಗಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಿದಲ್ಲಿ ಅಂತಹ ಅರ್ಜಿದಾರರಿಗೆ ಸದರಿ ವಿದ್ಯಾರ್ಹತೆಯು ಮೇಲಿನ ನಿಯಮಗಳಲ್ಲಿ ನಿಗಧಿ ಪಡಿಸಿ ಸೂಚಿಸಿರುವ ವಿದ್ಯಾರ್ಹತೆಗೆ ತತ್ಸಮಾನವಾಗಿರುವುದಿಲ್ಲ ಎಂದು ತಿಳಿಸಿ ಅವರುಗಳ ಅರ್ಜಿಯನ್ನು ತಿರಸ್ಕರಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

30/6/15

ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ

1. ಎಲ್ಲಾ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,
2. ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
3. ಎಲ್ಲಾ ವಿದ್ಯುತ್ ಪರಿವೀಕ್ಷಕರು,
4.ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು.